ಓ.ಎಸ್.ನಂ.48-2012
ಪಿ.ಡಬ್ಲು-೧

ದಿ: 12.12.2025 ರಂದು ವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು**</u>: 4ನೇ ಪ್ರತಿವಾದಿ ಪರ ಶ್ರೀಯುತ ಡಿ.ಜಿ. ವಕೀಲರಿಂದ.

ಮುನಿತಾಯಪ್ಪನಿಗೆ ನಾಲ್ಕು ಜನ ಮಕ್ಕಳು ಮತ್ತು ಅವರುಗಳು ಮುನಿನಾರಾಯಣಪ್ಪ, ಚಿನಕ್ಕ, ಚಿಕ್ಕಬುಡ್ಡಮ್ಮ, ಮುನಿಶ್ಯಾಮಪ್ಪ ಇರುತ್ತಾರೆ. ಮುನಿತಾಯಪ್ಪರವರಿಗೆ ಮುನಿಯಪ್ಪ ಎನ್ನುವ ಒಬ್ಬ ಮಗ ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಮುತ್ಯಾಲಮ್ಮ ಹೆಸರಿನ ನನ್ನ ಅಜ್ಜಿಯನ್ನು ಹೊರತುಪಡಿಸಿ ಮತ್ತೊಬ್ಬರು ಇರುತ್ತಾರೆ. ನಾವು ಗುಳ್ಳೆ ಮುನಿಗನ ವಂಶಸ್ಥರು ಎಂದರೆ ಸಾಕ್ಷಿಯು ನನ್ನ ತಾತ ಮುನಿತಾಯಪ್ಪರವರು ಗುಳ್ಳೆ ಮುನಿಗನ ವಂಶಸ್ಥರು ಎಂದು ನುಡಿಯುತ್ತಾರೆ. ದೇಖಾ ಎನ್ನುವವರಿಗೆ ಮುತ್ಯಾಲಪ್ಪ ಎನ್ನುವ ಏಕ ಮಾತ್ರ ಪುತ್ರನಿರುತ್ತಾನೆ ಎಂದರೆ ಸರಿ. ಸದರಿ ಮುತ್ಯಾಲಪ್ಪರವರಿಗೆ ೧ನೇ ಪ್ರತಿವಾದಿ ಏಕ ಮಾತ್ರ ಪುತ್ರಿಯಾಗಿರುತ್ತಾರೆ ಎಂದರೆ ಸರಿ.

2. ದಿ: 24.06.2006 ರಲ್ಲಿ ಗುಳ್ಳೆ ಮುನಿಗನ ವಾರಸುದಾರರಿಗೆ ಮಂಜೂರಾಗಿರುವ ಸರ್ವೆ ನಂ.30 ವಿಸ್ತೀರ್ಣ ಮುವತ್ತು ಕಾಲು ಗುಂಟೆ ಜಮೀನ್ನನ್ನು ನಾವುಗಳು ಮತ್ತು ಗುಳ್ಳೆ ಮುನಿಗನ ಇತರ ಸದಸ್ಯರು ಹನುಮಂತರೆಡ್ಡಿರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿಗೆ ಮತ್ತು ಪ್ರಸ್ತುತ ದಾವೆಗೆ ಯಾವುದೇ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಸದರಿ ಗುಳ್ಳೆ ಮುನಿಗನ ವಾರಸುದಾರರಿಗೆ ಮರುಮಂಜೂರಾಗಿದ್ದ ಜಮೀನ್ನನ್ನು ಹನುಮಂತ ರೆಡ್ಡಿರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಸದರಿ ಜಮೀನು ಮತ್ತು ಪ್ರಸ್ತುತ ದಾವೆ ಜಮೀನು ಬೇರೆ ಬೇರೆ ಎಂದು ನುಡಿಯುತ್ತಾರೆ. ಆ ರೀತಿ ನಾವುಗಳು ಮರಮಂಜೂರಾತಿಯಾದ ನಮ್ಮ ಹಿಸ್ಸೆಯ ಜಮೀನ್ನನ್ನು ಹನುಮಂತ ರೆಡ್ಡಿರವರಿಗೆ ಮಾರಾಟ ಮಾಡಿದ ಮೇರೆಗೆ ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಿ: 12.12.1995 ರಂದು ನಿಪಿ.3 ಮಂಜೂರಾತಿ ಆದೇಶದಂತೆ ನಮಗೆ ಮಂಜೂರಾಗಿದ್ದ ಸರ್ವೆ ನಂ.70 ವಿಸ್ತೀರ್ಣ 11 ಗುಂಟೆ ಜಮೀನ್ನನ್ನು ನಾವುಗಳು ಸೈಯದ್ ಅಮೀರ್ ಜಾನ್ ರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಸೈಯದ್ ಅಮೀರ್ ಜಾನ್ ರವರಿಗೆ ಬರೆದುಕೊಟ್ಟ ಕ್ರಯ ಪತ್ರದಲ್ಲಿ ಮುನಿತಾಯಪ್ಪರವರಿಗೆ ಮೂರು ಜನ ಗಂಡು ಮಕ್ಕಳು ಎಂದು ಕಾಣಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಾತ ಮುನಿತಾಯಪ್ಪರವರಿಗೆ ಮೂರು ಜನ ಗಂಡು ಮಕ್ಕಳಿದ್ದರು ಕೇವಲ ಇಬ್ಬರು ಗಂಡು ಮಕ್ಕಳು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮುನಿತಾಯಪ್ಪರವರ ಮೂರನೇ ಗಂಡು ಮಗನಾದ ಮುನಿಯಪ್ಪ ರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಪ್ರಸ್ತುತ ದಾವೆಯ ೨ನೇ ಪ್ರತಿವಾದಿಯಾದ ಮುತ್ಯಾಲಪ್ಪರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಮುತ್ಯಾಲಪ್ಪರವರಿಗೆ ರತ್ನಮ್ಮ ಎನ್ನುವ ಹೆಂಡತಿ ಮತ್ತು ಪೂಜಪ್ಪ, ನಾರಾಯಣಸ್ವಾಮಿ, ವೆಂಕಟೇಶ್ ಮತ್ತು ಪುಷ್ಪ ಎನ್ನುವ ವಾರಸುದಾರರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ೨ನೇ ಪ್ರತಿವಾದಿ ನಮ್ಮ ಊರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ಸದರಿ ೨ನೇ ಪ್ರತಿವಾದಿಯ ವಾರಸುದಾರರು ನಮ್ಮ ಊರಿನಲ್ಲಿ ವಾಸವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ೨ನೇ ಪ್ರತಿವಾದಿ ಮೃತಪಟ್ಟಿರುವ ವಿಚಾರ ನನಗೆ ತಿಳಿದಿದೆ. ನಾವು ಸದರಿ ೨ನೇ ಪ್ರತಿವಾದಿಯ ವಾರಸುದಾರರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಕಾಣಿಸಿರುವುದಿಲ್ಲ ಎಂದರೆ ಸರಿ. ನಮ್ಮ ಅಜ್ಜಿ ಮುತ್ಯಾಲಮ್ಮರವರು ಮುತ್ಯಾಲಪ್ಪರವರ ವಾರಸುದಾರರು ಎಂದು ತೋರಿಸುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಆರ್.ಆರ್.ಟಿ ಪ್ರಕರಣದ ಆದೇಶದ ಪ್ರತಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಆರ್.ಆರ್.ಟಿ ಪ್ರಕರಣವು ಬಾಸ್ಕರ್ ರೆಡ್ಡಿ ಮತ್ತು ಮುತ್ಯಾಲಮ್ಮರವರ ನಡುವೆ ನಡೆದಿರುತ್ತದೆ. ನಿಪಿ.5 ರಲ್ಲಿ ನಾನು ಪಕ್ಷಗಾರ ಆಗಿರುತ್ತೇನೆ ಮತ್ತು ಮುತ್ಯಾಲಮ್ಮರವರು

ಪಕ್ಷಗಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.5 ಪ್ರಕರಣದಲ್ಲಿ ೧ ಮತ್ತು ೨ನೇ ವಾದಿಗಳು ಪಕ್ಷಗಾರರು ಆಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ೧ನೇ ಪ್ರತಿವಾದಿಗೆ ಸೇರಿದ ಆಸ್ತಿಯ ಆದ ಮೇರೆಗೆ ನಮ್ಮ ಅಜ್ಜಿ ಮುತ್ಯಾಲಮ್ಮ ರವರಿಗೆ ಮತ್ತು ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುತ್ಯಾಲಮ್ಮ ಕೋಂ ಮುನಿತಾಯಪ್ಪ ರವರ ಹೆಸರಿನಲ್ಲಿ ದಾವಾ ಆಸ್ತಿ ಇತ್ತು ಎಂದು ತೋರಿಸುವ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ನಿಪಿ.೩ ರಲ್ಲಿ ಮುತ್ಯಾಲಮ್ಮ ಬಿನ್ ಮುತ್ಯಾಲಪ್ಪ ಎಂದು ನಮೂದು ಇರುತ್ತದೆ ಮತ್ತು ಮುತ್ಯಾಲಮ್ಮ ಕೋಂ ಮುನಿತಾಯಪ್ಪ ಎಂದು ಎಲ್ಲಿಯೂ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ.

4. ನಿಪಿ.೩ ರಂತೆ ಮುತ್ಯಾಲಮ್ಮ ಕೋಂ ಮುನಿತಾಯಪ್ಪ ರವರ ಹೆಸರಿನಲ್ಲಿ ಯಾವುದಾದರು ದಾಖಲೆ ಅಥವಾ ಪಹಣಿ ನಮೂದು ಆಗಿದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮುತ್ಯಾಲಮ್ಮ ತಂದೆ ಎಂದು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ೧ನೇ ಪ್ರತಿವಾದಿಯ ಗಂಡನ ಹೆಸರು ಮುನಿಯಪ್ಪ ಯಾನೆ ಗುಳ್ಳಪ್ಪ ಎಂದರೆ ಸರಿ. ನಿಪಿ.6 ರಲ್ಲಿ ಮುತ್ಯಾಲಮ್ಮ ಕೋಂ ಮುನಿಯಪ್ಪ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.6 ರಲ್ಲಿ ಮುತ್ಯಾಲಮ್ಮ ಕೋಂ ಮುನಿಯಪ್ಪ ಎಂದು ನಮೂದಾಗಿರುತ್ತದೆ ಮತ್ತು ಮುತ್ಯಾಲಮ್ಮ ಕೋಂ ಮುತ್ಯಾಲಪ್ಪ ಎಂದು ನಮೂದಾಗಿರುವುದಿಲ್ಲ ಹಾಗೂ ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ದಾವಾ ಆಸ್ತಿಯ ಕಂದಾಯವನ್ನು ಪಾವತಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ಪೂರ್ವಜರು ಕಂದಾಯ ಪಾವತಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ 1 ಮತ್ತು 2ನೇ ವಾದಿಗಳು ದಾವಾ ಆಸ್ತಿಯ ಕಂದಾಯವನ್ನು ಪಾವತಿಸಿದ್ದಾರೆ ಎನ್ನುವ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯು ನಮಗೆ ಸೇರಿರದ ಮೇರೆಗೆ ನಾವುಗಳು ದಾವಾ ಆಸ್ತಿಗೆ ಯಾವುದೇ ಕಂದಾಯವನ್ನು ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ವಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.